<u>ಸಾಕ್ಷಿಯನ್ನು ದಿಃ 18.12.2023 ರಂದು ಕರೆಸಿ ಪ್ರಮಾಣೀಕರಿಸಲಾಯಿತು</u>

<u>ಪಾಟೀಸವಾಲು ಪ್ರತಿವಾದಿ ಪರ ಶ್ರೀ ಎನ್ ಎಸ್ ವಕೀಲರಿಂದಃ</u>

ನಾನು ಘಟ್ಟ ಕಾಮಧೇನಹಳ್ಳಿಯಲ್ಲಿ ಹುಟ್ಟಿನಿಂದ ವಾಸ ಇರುತ್ತೇನೆ. ದಾವಸ್ವತ್ತು ನನ್ನ ಮನೆ ಇಂದ ಅರ್ಧ ಫರ್ಲಾಂಗ್ ದೂರ ಇರುತ್ತದೆ. ದಾವಸ್ವತ್ತನ್ನು ನಾನು ಆಗಾಗ ನೋಡಿರುತ್ತೇನೆಂದರೆ ಸರಿ. ಈ ದಾವೆಯನ್ನು ಸ ನಂ 2/6 ರ ಕುರಿತು ಸಲ್ಲಿಸಿರುತ್ತೇನೆ. ಸದರಿ ಸ್ವತ್ತು ನನ್ನ ಪಿತ್ರಾರ್ಜಿತ ಆಸ್ತಿಯಾಗಿದ್ದು, ನನ್ನ ಅಜ್ಜನಾದ ವೆಂಕಟರಾಮಯ್ಯ ರವರಿಗೆ ಸರ್ಕಾರದಿಂದ ಮಂಜೂರಾಗಿರುತ್ತದೆ. ಯಾವ ವರ್ಷದಲ್ಲಿ ಮಂಜೂರಾಗಿದೆ ಎಂದು ನನಗೆ ಗೊತ್ತಿಲ್ಲ. 07 ಗುಂಟೆ ಸ್ವತ್ತು ಮಂಜೂರಾಗಿರುತ್ತದೆ. ಈ ಕುರಿತು ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ಮಂಜೂರಾತಿ ಆದ ಪ್ರಕಾರ ಹಕ್ಕು ಬದಲಾವಣೆ ಆಗಿರುವ ಬಗ್ಗೆ ದಾಖಲಾತಿ ಇರುವುದಿಲ್ಲ, ಸಾಕ್ಷಿಯು ಮುಂದುವರೆದು ನನ್ನ ಅಜ್ಜನಿಂದ ನನ್ನ ತಾಯಿ ಮತ್ತು ಚಿಕ್ಕಮ್ಮ ರವರಿಗೆ ಹಕ್ಕು ಬದಲಾವಣೆ ಆದ ಬಗ್ಗೆ ದಾಖಲಾತಿ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ಅಜ್ಜನ ಹೆಸರಿಗೆ ಪಹಣಿ ಇದ್ದ ಕುರಿತು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನನ್ನ ತಾಯಿ ಹೆಸರಿಗೆ ಮಾತ್ರ ಇತ್ತು ಎಂದು ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಅಜ್ಜನ ಹೆಸರಿಗೆ ಮಂಜೂರಾಗಿ ಬಂದ ಮತ್ತು ಮೇಲ್ಕಂಡ ಸ್ವತ್ತು ಅವರ ಹೆಸರಿನಲ್ಲಿದ್ದ ಕುರಿತು ದಾಖಲಾತಿಗಳು ಇರುವುದಿಲ್ಲ. ದಾವಸ್ವತ್ತಿನ ಚೆಕ್ಕುಬಂದಿಯನ್ನು ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ನಾಂಚರಮ್ಮ ಮತ್ತು ಕೋದಂಡಪ್ಪ ರವರ ಸ್ವತ್ತು. ಉತ್ತರಕ್ಕೆ ನಡುಪಣ್ಣ ಮತ್ತು ಮಂಗಮ್ಮ ರವರ ಸ್ವತ್ತು. ದಕ್ಷಿಣಕ್ಕೆ ನಾರಾಯಣ ಮತ್ತು ಒ ಎಂ ಶ್ರೀನಿವಾಸ್ ರವರ ಸ್ವತ್ತು. ದಾವೆಯಲ್ಲಿ ಮೇಲ್ಕಂಡಂತೆ ವ್ಯಕ್ತಿಗಳ ಹೆಸರನ್ನು ನಮೂದಿಸಿರುತ್ತೇನೆ. ಮೇಲ್ಕಂಡ ಚೆಕ್ಕುಬಂದಿ ನಮೂದಿಸಿರುವ ಸ್ವತ್ತು ನಮ್ಮ ತಾತನಿಗೆ ಮಂಜೂರಾದ ಕುರಿತು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ಯಾವುದೇ ಆಸ್ತಿ ಮಂಜೂರು ಆದಲ್ಲಿ ಪೋಡಿ ಮಾಡಿ, ದಾಖಲಾತಿ ನೀಡುತ್ತಾರೆಂದರೆ ಸರಿ. ದಾವಸ್ವತ್ತಿನ ಸರ್ವೆ ನಂಬರ್ ಮೊದಲಿನಿಂದಲೂ ಅದೇ ನಂಬರ್ ಇರುತ್ತದೆ. ನಿಪಿ-23 ಹದ್ದು ಬಸ್ತು ಸ್ಕೆಚ್ ಆಗಿದ್ದು ಅದು ಪೋಡಿ ದುರಸ್ತಿ ಸ್ಕೆಚ್ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಸ್ಕೆಚ್ ಮಾಡಿ ಕೊಟ್ಟಿರುವುದು ಮಾತ್ರ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ.

ನನ್ನ ಅಜ್ಜ ವೆಂಕಟರಾಮಯ್ಯ ರವರಿಗೆ ನನ್ನ ತಾಯಿ ಮಂಗಮ್ಮ ಮತ್ತು ಜಾನಕಮ್ಮ ಎರಡು ಜನ ಮಕ್ಕಳಿರುತ್ತಾರೆ. ನನ್ನ ಅಜ್ಜ ಇದ್ದ ಸಮಯದಲ್ಲಿ ಅವರ ಮತ್ತು ನನ್ನ ತಾಯಿ, ಚಿಕ್ಕಮ್ಮ ರವರ ಮಧ್ಯೆ ವಿಭಾಗವಾಗಿರುವುದಿಲ್ಲ. ನನ್ನ ಅಜ್ಜ ಮರಣ ಹೊಂದಿದ ನಂತರ ನನ್ನ ತಾಯಿ ಮತ್ತು ಚಿಕ್ಕಮ್ಮ ರವರ ಮಧ್ಯೆ ವಿಭಾಗವಾಗಿರುವುದಿಲ್ಲ. ನನ್ನ ಅಜ್ಜ ಮರಣ ಹೊಂದಿದ ನಂತರ ನನ್ನ ತಾಯಿ ಮತ್ತು ಚಿಕ್ಕಮ್ಮ ರವರ ಹೆಸರಿನಲ್ಲಿ ಸ್ವತ್ತಿನ ಖಾತೆಬದಲಾವಣೆ ಆಗಿರುತ್ತದೆ. ಈ ಕುರಿತು ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ.

ನನ್ನ ಚಿಕ್ಕಮ್ಮ ಜಾನಕಮ್ಮ ರವರಿಗೆ ಮಕ್ಕಳಿರುವುದಿಲ್ಲ. ನನ್ನ ತಾಯಿಗೆ ನಾನೂ ಸೇರಿ ಐದು ಜನ ಮಕ್ಕಳಿರುತ್ತೇವೆ. ತಹಶೀಲ್ದಾರ್ ರವರಿಂದ ವಂಶವೃಕ್ಷವನ್ನು ಪಡೆದಿರುತ್ತೇವೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಿಪಿ-1 ಆಗುವ ಕಾಲಕ್ಕೆ ನನ್ನ ತಾಯಿ ಮತ್ತು ಚಿಕ್ಕಮ್ಮ ಬದುಕಿದ್ದರು. ನನ್ನ ತಾಯಿ ಮತ್ತು ನನ್ನ ಚಿಕ್ಕಮ್ಮ ಎಲ್ಲಾ ಆಸ್ತಿಗಳು ನನಗೆ ಸೇರಬೇಕೆಂದು ನೋಂದಾಯಿತ ಪತ್ರ ಮಾಡಿಕೊಟ್ಟಿರುವುದಿಲ್ಲ. ನನ್ನ ತಾಯಿಗೆ ನಾನು, ಶ್ರೀವಲ್ಲಿ, ಜಯದೇವ್, ಸುಶೀಲಮ್ಮ, ವೇದವತಿ ಮಕ್ಕಳು ಇರುತ್ತೇವೆ. ಮೇಲ್ಕಂಡವರಲ್ಲಿ ಶ್ರೀವಲ್ಲಿ, ಜಯದೇವ್ ರವರು ಮರಣ ಹೊಂದಿರುತ್ತಾರೆ. ಸದರಿಯವರು ಚಿಕ್ಕ ವಯಸ್ಸಿನಲ್ಲಿ ಮರಣ ಹೊಂದಿರುತ್ತಾರೆ. ಈ ಕುರಿತು ದಾಖಲಾತಿಗಳು ನನ್ನ ಬಳಿ ಇರುತ್ತವೆ.

ದಾವಸ್ವತ್ತು ನನ್ನ ಅಜ್ಜನಿಗೆ ಮಂಜೂರಾಗಿದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಸ್ವತ್ತು ನನ್ನ ಪಿತ್ರಾರ್ಜಿತ ಆಸ್ತಿ ಎಂದು ನಾನು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಪಿ-1 ಸೃಷ್ಟಿ ಮಾಡಿದ ದಾಖಲಾತಿ ಎಂದರೆ ಸರಿಯಲ್ಲ. ದಾವ ಶೆಡ್ಯೂಲ್ ನಲ್ಲಿ ತೋರಿಸಿರುವ ಚೆಕ್ಕುಬಂದಿಯಂತೆ ನಿಪಿ-1 ರ ಸ್ವತ್ತು ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಲ್ಲಿರುವ ಜಮೀನುಗಳನ್ನು ನಾವು ಉಳುಮೆ ಮಾಡುತ್ತಿದ್ದೇವೆ. ದಾವಸ್ವತ್ತಿನ ಪಕ್ಕದಲ್ಲಿ ಸರ್ವೆ ನಂಬರ್ 2/10 ರ ಜಮೀನು ಸುಮಾರು 4-5 ಗಜ ಅಂತರದಲ್ಲಿರುತ್ತದೆ. ಸದರಿ ಸ ನಂ 2/10 ರಲ್ಲಿ ನನ್ನ ತಾತನವರ ಸಮಾಧಿ ಇರುತ್ತದೆ. ನಿಪಿ-3 ರಿಂದ 15 ದಾಖಲಾತಿಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ನಿಪಿ-16 ರಿಂದ 22 ರ ದಾಖಲಾತಿಗಳಂತೆ ಯಾವುದೇ ಕಂದಾಯವನ್ನು ದಾವಸ್ವತ್ತಿನ ಕುರಿತು ಪಾವತಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ದಾವಸ್ವತ್ತನ್ನು 2014 ರಲ್ಲಿ ಸರ್ವೆ ಮಾಡಲು ಅರ್ಜಿ ನೀಡಿರುತ್ತೇನೆ. ಆ ಸಮಯದಲ್ಲಿ ನಮ್ಮ ಜಮೀನನ್ನು ಒತ್ತುವರಿ ಮಾಡಲು ಬಂದಿದ್ದರಿಂದ ನಾನು ಅಳತೆ ಮಾಡಲು ಅರ್ಜಿ ನೀಡಿರುತ್ತೇನೆ. ಮುನಿಯಪ್ಪ, ಅವರ ಸಹೋದರ ನಾರಾಯಣ, ಅವರ ಮಗ ಸುನಿಲ್, ಮತ್ತು ಸುನಿಲ್ ರವರ ಹೆಂಡತಿ ರವರು ಒತ್ತುವರಿ ಮಾಡಲು ಬಂದಿರುತ್ತಾರೆ. ಸದರಿಯವರು ಒತ್ತುವರಿ ಮಾಡಿ ತಳಪಾಯ ಹಾಕಲು ಬಂದಿರುತ್ತಾರೆ. ನಾನು ಅರ್ಜಿ ನೀಡುವ ಸಮಯದಲ್ಲಿ ಅವರು ತಳಪಾಯ ಹಾಕಿರುತ್ತಾರೆ. ಸಾಕ್ಷಿಯು ಮುಂದುವರೆದು ಒಂದು ಮಹಡಿ ಕಟ್ಟಡವನ್ನೂ ಕೂಡ ನಿರ್ಮಾಣ ಮಾಡಿದ್ದಾರೆಂದು ನುಡಿಯುತ್ತಾರೆ. ಪ್ರತಿವಾದಿಗಳು ಒತ್ತುವರಿ ಮಾಡಿ ಕಟ್ಟಡ ನಿರ್ಮಾಣ ಮಾಡಿದ್ದರಿಂದ ನಾವು ಅಳತೆ ಮಾಡಲು ಅರ್ಜಿ ನೀಡಿರುತ್ತೇವೆ. ಪ್ರತಿವಾದಿಗಳು ತಳಪಾಯ ತೆಗೆದು ಒಂದು ಮಹಡಿ ಕಟ್ಟಡ ಕಟ್ಟುವ ಸಮಯದಲ್ಲಿ ನಾವು ಅವರಿಗೆ ಹೇಳಿರುತ್ತೇವೆ, ಆದರೂ ಅವರು ಕಟ್ಟಡ ನಿರ್ಮಾಣ ಮಾಡಿರುತ್ತಾರೆ. ಈ ಕುರಿತು ಪೊಲೀಸರಿಗೆ ದೂರು ನೀಡಿರುವುದಿಲ್ಲ, ಅವರ ಬಳಿ ಹೋಗಿರುತ್ತೇವೆ. ಈ ದಾವೆ ಹಾಕುವ ಸಮಯದಲ್ಲಿ ನೆಲ ಮಹಡಿ ಮಾತ್ರ ಇತ್ತು. ಈಗ ಅದರ ಮೇಲೆ ಒಂದು ಮತ್ತು ಎರಡನೇ ಮಹಡಿ ನಿರ್ಮಾಣ ಮಾಡಿರುತ್ತಾರೆ. ದಾವೆಯಲ್ಲಿ ನೆಲಮಹಡಿ ನಿರ್ಮಾಣ ಆಗಿತ್ತು ಎಂದು ಹೇಳಿರಬಹುದು. ಸದರಿ ನೆಲಮಹಡಿಯನ್ನು ತೆರುವುಗೊಳಿಸುವಂತೆ ಈ ದಾವೆಯಲ್ಲಿ ಹೇಳಿರುತ್ತೇವೆ. ದಾವಸ್ವತ್ತಿನಲ್ಲಿರುವ ಕಟ್ಟಡವನ್ನು ನಾವು ನಿರ್ಮಾಣ ಮಾಡಿರುವುದಿಲ್ಲ. ಕಟ್ಟಡ ನಮ್ಮದ್ದು ಎಂದು ಈ ದಾವೆಯಲ್ಲಿ ಹೇಳಿರುವುದಿಲ್ಲ, ಸಾಕ್ಷಿಯು ಮುಂದುವರೆದು ಜಾಗ ನಮ್ಮದು ಎಂದು ಹೇಳಿರುತ್ತೇವೆ. ದಾವಸ್ವತ್ತು ನಮಗೆ ಸಂಬಂಧಿಸಿದ್ದು ಅಲ್ಲ, ಅದರಲ್ಲಿ ಪ್ರತಿವಾದಿ ಕಟ್ಟಡ ನಿರ್ಮಾಣ ಮಾಡಿಲ್ಲ ಎಂದರೆ ಸರಿಯಲ್ಲ. ದಾವಸ್ವತ್ತಿನಲ್ಲಿ ತಳಪಾಯ ಹಾಕುವ ಸಮಯದಲ್ಲಿ, ನೆಲಮಹಡಿ ನಿರ್ಮಾಣದ ಸಮಯದಲ್ಲಿ ಯಾವುದೇ ಗಲಾಟೆ ಇರಲಿಲ್ಲ, 1ನೇ ಮಹಡಿ ನಿರ್ಮಾಣದ ಸಮಯದಲ್ಲಿ ಗಲಾಟೆ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನೆಲಮಹಡಿ ಕಟ್ಟುವ ಸಮಯದಲ್ಲೂ ಗಲಾಟೆ ಆಗಿರುತ್ತದೆ ಮತ್ತು ಆ ಸಮಯದಲ್ಲಿ ಪ್ರತಿವಾದಿಯು ನನಗೆ ಜೀವದ ಬೆದರಿಕೆ ಹಾಕಿದ್ದರು ಎಂದು ನುಡಿಯುತ್ತಾರೆ. ಈ ಕುರಿತು ಪೊಲೀಸರಿಗೆ ದೂರು ನೀಡಿರುವುದಿಲ್ಲ. ಮೇಲ್ಕಂಡ ವಿಚಾರಗಳನ್ನು ಈ ದಾವೆಯಲ್ಲಿ ಸೇರಿಸಿದ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-23

ರಿಂದ 25 ದಾಖಲಾತಿಗಳು ಸೃಷ್ಟಿ ಮಾಡಿ ಹಾಜರುಪಡಿಸಿದ ದಾಖಲಾತಿಗಳು ಎಂದರೆ ಸರಿಯಲ್ಲ. ನಿಪಿ-26 ರಿಂದ 31 ಪೋಟೋಗಳನ್ನು 2019-22 ರಲ್ಲಿ ತೆಗೆದ ಪೋಟೋಗಳಾಗಿರುತ್ತವೆ. ಸದರಿ ಪೋಟೋಗಳನ್ನು ಮೇಲ್ಕಂಡ ಅವಧಿಯಲ್ಲಿ ತೆಗೆದ ಕುರಿತು ದಾಖಲಾತಿಗಳು ಇವೆಯೇ ಎಂದರೆ ಸಾಕ್ಷಿಯು ಸದರಿ ಪೋಟೋಗಳನ್ನು ಮೊಬೈಲ್ ನಲ್ಲಿ ತೆಗೆಯಲಾಗಿದೆ ಎಂದು ನುಡಿಯುತ್ತಾರೆ. ಮೇಲ್ಕಂಡ ಪೋಟೋಗಳಲ್ಲಿನ ಕಟ್ಟಡವು 2016 ಕ್ಕಿಂತ ಮುಂಚೆ ನಿರ್ಮಾಣವಾಗಿದ್ದರೂ ಕೂಡ 2019-20 ರಲ್ಲಿ ನಿರ್ಮಾಣವಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಪಿ-26 ರಿಂದ 31 ರಲ್ಲಿರುವ ಕಟ್ಟಡವು ದಾವಸ್ವತ್ತಿನಲ್ಲಿ ಬರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ದಾವಸ್ವತ್ತು ಘಟ್ಟ ಕಾಮಧೇನಹಳ್ಳಿ ಪಂಚಾಯ್ತಿ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿ. ಕಟ್ಟಡವು ಘಟ್ಟ ಕಾಮಧೇನಹಳ್ಳಿ ಪಂಚಾಯ್ತಿಯ ವಿ ಪಿ ಖಾತೆ ಸ್ವತ್ತಿನಲ್ಲಿರುವ ಕಟ್ಟಡವಾಗಿರುತ್ತದೆ ಎಂದರೆ ಸರಿಯಲ್ಲ. ಕಟ್ಟಡ ಇರುವ ಜಾಗವು ಮೊದಲಿನಿಂದಲೂ ವಿ ಪಿ ಖಾತೆಯಲ್ಲಿದ್ದು 1 ನೇಪ್ರತಿವಾದಿಯು ನಾರಾಯಣಪ್ಪ ಎಂಬುವವರಿಂದ ವಿ ಪಿ ಖಾತೆಯಲ್ಲಿನ ಆಸ್ತಿಯನ್ನು ಖರೀದಿ ಮಾಡಿರುತ್ತಾರೆಂದರೆ ಸರಿಯಲ್ಲ. ಸದರಿ ವಿ ಪಿ ಖಾತೆಯಲ್ಲಿನ ಆಸ್ತಿಯನ್ನು 1 ನೇಪ್ರತಿವಾದಿಯು 2012 ರಲ್ಲಿ 4 ನೇಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಪ್ರತಿವಾದಿಗಳು ದಾವೆಯಲ್ಲಿ ಸಲ್ಲಿಸಿರುವ ತಕರಾರಿನ ಬಗ್ಗೆ ತಿಳಿದುಕೊಂಡಿರುತ್ತೇನೆ. ಸದರಿಯವರು ತಮ್ಮ ತಕರಾರಿನಲ್ಲಿ ವಿ ಪಿ ಖಾತೆ ಸಂಖ್ಯೆಯಲ್ಲಿನ ಆಸ್ತಿಯನ್ನು ಖರೀದಿ ಮಾಡಿರುವುದಾಗಿ ಹೇಳಿರುತ್ತಾರೆಂದರೆ ಸರಿ. 4 ನೇಪ್ರತಿವಾದಿಯು ತಾವು ಖರೀದಿಸಿದ ಸ್ವತ್ತಿನ ಕುರಿತು ಇ ಸ್ವತ್ತು ದಾಖಲಾತಿ ಮಾಡಿಸಿಕೊಂಡಿರುತ್ತಾರೆಂದರೆ ಸರಿ. ಈ ದಾವೆ ಸಲ್ಲಿಸುವ ಸಮಯದಲ್ಲಿ 4 ನೇಪ್ರತಿವಾದಿ ಹೆಸರಿನಲ್ಲಿ ಇ ಸ್ವತ್ತು ದಾಖಲಾತಿ ಇರುವ ಬಗ್ಗೆ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. 1 ನೇಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ವಿ ಪಿ ಖಾತೆ ಆಸ್ತಿಯನ್ನು 4 ನೇಪ್ರತಿವಾದಿಗೆ ಮಾರಾಟ ಮಾಡಿದ ವಿಚಾರವನ್ನು ತಕರಾರಿನಲ್ಲಿ ಹೇಳಿದ್ದರು ಎಂದರೆ ಸರಿ. ಆ ಸಮಯದಲ್ಲಿ 4 ನೇಪ್ರತಿವಾದಿಯನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಕಾಲಮಿತಿ ಒಳಗೆ ಸೇರಿಸಿಲ್ಲ ಎಂದರೆ ಸಾಕ್ಷಿಯು ಅವರ ಹೆಸರಿನಲ್ಲಿದ್ದುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 4 ನೇಪ್ರತಿವಾದಿಯು ಕಟ್ಟಡ ನಿರ್ಮಾಣ ಮಾಡುವ ಸಮಯದಲ್ಲಿ ಯಾವುದೇ ತಕರಾರು ಮಾಡದೇ, ಕಟ್ಟಡ ಪೂರ್ಣ ಗೊಂಡ

ನಂತರ ಅವರಿಗೆ ತೊಂದರೆಕೊಡುವ ಸಲುವಾಗಿ ಅದನ್ನು ತೆರವುಗೊಳಿಸಿ ಸ್ವಾಧೀನಕೊಡಿಸುವಂತೆ ಕೋರಿರುತ್ತೇನೆಂದರೆ ಸರಿಯಲ್ಲ. 1 ನೇಪ್ರತಿವಾದಿ ಇಂದ 4 ನೇಪ್ರತಿವಾದಿಯು ಕಾನೂನು ಬದ್ದವಾಗಿ ಖರೀದಿ ಮಾಡಿ ನಂತರ ಸದರಿ ಸ್ವತ್ತಿನಲ್ಲಿ ಅವರು ಕಟ್ಟಡ ನಿರ್ಮಾಣ ಮಾಡಿರುತ್ತಾರೆಂದರೆ ಸರಿಯಲ್ಲ. ಕಟ್ಟಡ ನಿರ್ಮಾಣ ಸಮಯದಲ್ಲಿ ನಾನು ಯಾವುದೇ ಪ್ರಶ್ನೆ ಮಾಡದೇ ಈಗ ಅವರು ಪ್ರಾಣ ಬೆದರಿಕೆ ಹಾಕಿದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಇರಲಿಲ್ಲ ಮತ್ತು ನಾನು ಸ್ವಾಧೀನ ಇರಲಿಲ್ಲ ಮತ್ತು ಪ್ರತಿವಾದಿಗಳು ನನಗೆ ಯಾವತ್ತೂ ನನ್ನ ಸ್ವಾಧೀನಕ್ಕೆ ಅಡ್ಡಿ ಪಡಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆಕೊಡುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**(ಮಂಜುನಾಥ. ಆರ್)**

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಅಪರ ಜೆ ಎಂ ಎಫ್ ಸಿ, ಕೆ ಜಿ ಎಫ್